**<u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>**

**IID**:2/2025

ಎಂ.ಡಬ್ಲ್ಯೂ-1

**<u>ದಿನಾಂಕ 17.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಪಿ.ಪಿ.ಬಿ.ಆರ್. ವಕೀಲರಿಂದಃ**

1 ನೇ ಪಕ್ಷಗಾರರು ನಮ್ಮ ಸಂಸ್ಥೆಯಲ್ಲಿ 2006 ನೇ ಇಸವಿಯಿಂದ ಕೆಲಸ ಮಾಡುತ್ತಿರುತ್ತಾರೆ ಎಂದರೆ ಬದಲಿಯಾಗಿ ಕೆಲಸ ಮಾಡುತ್ತಿರುತ್ತಾರೆ ಎನ್ನುತ್ತಾರೆ. 1 ನೇ ಪಕ್ಷಗಾರರ ಕಾರ್ಮಿಕ ಸಂಖ್ಯೆ-201369. 1 ನೇ ಪಕ್ಷಗಾರರಿಗೆ ನಾವು ಗುರುತಿನ ಚೀಟಿ ಕೊಟ್ಟಿರುತ್ತೇವೆ ಎಂದರೆ ಸರಿ. 2006 ನೇ ಇಸವಿಯಿಂದ 1 ನೇ ಪಕ್ಷಗಾರರು ಬಿ.ಯೂ.2 Tyre building ವಿಭಾಗದಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸಾಕ್ಷಿ ಅವರು ಬೇರೆ ವಿಭಾಗಗಳಲ್ಲೂ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. 1 ನೇ ಪಕ್ಷಗಾರರು 2020 ನೇ ಇಸವಿ ವರೆಗೂ ಒಂದೇ ವಿಭಾಗದಲ್ಲಿ ಕೆಲಸ ಮಾಡಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2006 ರಿಂದ 2020 ರವರೆಗೆ 1 ನೇ ಪಕ್ಷಗಾರರು ಬದಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರಿ.

1 ನೇ ಪಕ್ಷಗಾರರು ಬದಲಿ ಕಾರ್ಮಿಕ ಸಂಘಕ್ಕೆ ನೋಂದಣಿ ಆಗಿದ್ದ ಕಾರಣ ದಿನಾಂಕಃ17-09-2020 ರಂದು ಅವರ ಪಂಚ್ ಕಾರ್ಡ್ (punch card) ಅನ್ನು ಲಾಕ್ ಮಾಡಿದ್ದೇವು ಎಂದರೆ ಸರಿಯಲ್ಲ. 1 ನೇ ಪಕ್ಷಗಾರರ ಜೊತೆಗೆ 28 ಕಾರ್ಮಿಕರ ಪಂಚ್ ಕಾರ್ಡ್ ಅನ್ನು ನಾವು ಲಾಕ್ ಮಾಡಿದ್ದೇವು ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಸಿ 1 ನೇ ಪಕ್ಷಗಾರರು ಹಾಗೂ ಇತರೆ ಕಾರ್ಮಿಕರು Ref.15/2021 ರಲ್ಲಿ ಇದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿ.

ನಂತರ ಸದರಿ 29 ಬದಲಿ ಕಾರ್ಮಿಕರನ್ನು ದಿನಾಂಕಃ 09.10.2024 ರಂದು ಪುನಃ ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳಬೇಕು ಎಂದು ಈ ನ್ಯಾಯಾಲಯ ಆದೇಶ ಮಾಡಿತ್ತು ಎಂದರೆ ಸಾಕ್ಷಿ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡಿದ್ದೇವು ಎನ್ನುತ್ತಾರೆ. ಸದರಿ ಕಾರ್ಮಿಕರು ಫೆಬ್ರವರಿ ತಿಂಗಳಿನಲ್ಲಿ ನಮ್ಮ ಕಾರ್ಖಾನೆಗೆ ಬಂದಿದ್ದರು ಅವರನ್ನು ಕೆಲಸಕ್ಕೆ ತೆಗೆದುಕೊಂಡಿರುತ್ತೇವೆ ಎಂದು ಹೇಳುತ್ತಾರೆ. ಈ ಸಂಬಂಧ 1 ನೇ ಪಕ್ಷಗಾರರಿಗೆ ಕೆಲಸಕ್ಕೆ ಬಂದು ಸೇರಿಕೊಳ್ಳಲು ಪತ್ರ ಬರೆದಿದ್ದಾರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ.

ದಿನಾಂಕಃ 08.02.2022 ರಂದು 1 ನೇ ಪಕ್ಷಗಾರರು ನಮ್ಮ ಕಚೇರಿಗೆ ಬಂದಿದ್ದರು ನಾವು ಅವರನ್ನು ವಾಪಸ್ಸು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಬಿ.ಯೂ.1 department head ಮಹೇಶ್. ಎನ್ ರವರು 1 ನೇ ಪಕ್ಷಗಾರರಿಗೆ ಕೆಲಸಕ್ಕೆ ತೆಗೆದುಕೊಳ್ಳಲೇ ಬೇಕು ಎಂದು ನ್ಯಾಯಾಲಯ ಆದೇಶ ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಫೆಬ್ರವರಿ ತಿಂಗಳಲ್ಲಿ ನಾವು 1 ನೇ ಪಕ್ಷಗಾರರಿಗೆ ಕೇವಲ 9 ತಿಂಗಳು ಮಾತ್ರ ಕೆಲಸ ಕೊಟ್ಟಿರುತ್ತೇವೆ ಎಂದರೆ ಅವರು ಎಷ್ಟು ದಿನ ಬಂದಿರುತ್ತಾರೂ ಅಷ್ಟು ದಿನ ಕೆಲಸದ ಲಭ್ಯತೆ ಆಧಾರದ ಮೇಲೆ ಕೆಲಸ ಕೊಟ್ಟಿರುತ್ತೇವೆ ಎನ್ನುತ್ತಾರೆ. ಫೆಬ್ರವರಿ ತಿಂಗಳಿನಲ್ಲಿ 1 ನೇ ಪಕ್ಷಗಾರರು 16 ದಿನಗಳು ಕೆಲಸಕ್ಕೆ ಬಂದಿದ್ದರು ನಾವು ಅವರಿಗೆ 9 ದಿನಗಳು ಕೆಲಸ ನೀಡಿರುತ್ತೇವೆ ಎಂದರೆ ಸಾಕ್ಷಿ ಲಭ್ಯತೆಯ ಆಧಾರದ ಮೇಲೆ ಕೆಲಸ ಕೊಟ್ಟಿರುತ್ತೇವೆ ಎನ್ನುತ್ತಾರೆ. ಅದೇ ರೀತಿ ಮಾರ್ಚ್ ತಿಂಗಳಿನಲ್ಲಿ ಅವರು 23 ದಿನಗಳು ಕೆಲಸಕ್ಕೆ ಬಂದಿದ್ದರು ನಾವು ಅವರಿಗೆ 16 ದಿನಗಳು ಕೆಲಸ ಕೊಟ್ಟಿರುತ್ತೇವೆ ಎಂದರೆ ಲಭ್ಯತೆಯ ಆಧಾರದ ಮೇಲೆ ಕೆಲಸ ಕೊಟ್ಟಿರುತ್ತೇವೆ ಎನ್ನುತ್ತಾರೆ. ಅದೇ ರೀತಿ ಮೇ ತಿಂಗಳಿನಲ್ಲಿ ಅವರು 21 ದಿನಗಳು ಕೆಲಸಕ್ಕೆ ಬಂದಿದ್ದರು ನಾವು ಅವರಿಗೆ 15 ದಿನಗಳು ಕೆಲಸ ಕೊಟ್ಟಿರುತ್ತೇವೆ ಎಂದರೆ ಲಭ್ಯತೆಯ ಆಧಾರದ ಮೇಲೆ ಕೆಲಸ ಕೊಟ್ಟಿರುತ್ತೇವೆ ಎನ್ನುತ್ತಾರೆ.

ಅದೇ ರೀತಿ  ಜೂನ್ ತಿಂಗಳಿನಲ್ಲಿ ಅವರು 9 ದಿನಗಳು ಕೆಲಸಕ್ಕೆ ಬಂದಿದ್ದರು ನಾವು ಅವರಿಗೆ 7 ದಿನಗಳು ಕೆಲಸ ಕೊಟ್ಟಿರುತ್ತೇವೆ ಎಂದರೆ ಲಭ್ಯತೆಯ ಆಧಾರದ ಮೇಲೆ ಕೆಲಸ ಕೊಟ್ಟಿರುತ್ತೇವೆ ಎನ್ನುತ್ತಾರೆ.

ನಾವು 1 ನೇ ಪಕ್ಷಗಾರರನ್ನು ಕೆಲಸಕ್ಕೆ ತೆಗೆದುಕೊಂಡ ಮೇಲೆ ಅವರ ವಿಭಾಗಗಳನ್ನು ಬದಲಾವಣೆ ಮಾಡಿರುತ್ತೇವೆ ಎಂದರೆ ಸಾಕ್ಷಿ ಮಾನವ ಸಂಪನ್ಮೂಲ ಎಲ್ಲಿ ಬೇಕಾಗುತ್ತದೋ ಅಲ್ಲಿ ಅವರಿಗೆ ಕೆಲಸವನ್ನು ನೀಡಿರುತ್ತೇವೆ ಎನ್ನುತ್ತಾರೆ. 1 ನೇ ಪಕ್ಷಗಾರರು ಬಿ.ಯೂ.2 Tyre building ವಿಭಾಗದಲ್ಲಿ 14 ವರ್ಷ ಅನುಭವವುಳ್ಳ ವ್ಯಕ್ತಿಯನ್ನು ನಾವು ಬಿ.ಯೂ.1 Ban bury ಯಲ್ಲಿ ನಿಯೂೕಜನೆ ಮಾಡಿರುತ್ತೇವೆ ಎಂದರೆ ಸಾಕ್ಷಿ ಬೇರೆ ಬೇರೆ ವಿಭಾಗದಲ್ಲಿ ನಿಯೋಜನೆ ಮಾಡಿರುತ್ತೇವೆ ಎನ್ನುತ್ತಾರೆ. ನಾವು ವೈಯುಕ್ತಿಕ ದ್ವೇಷದಿಂದ 1 ನೇ ಪಕ್ಷಗಾರರನ್ನು ವಿಭಾಗಗಳಲ್ಲಿ ಬದಲಾವಣೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರಿಗೆ Ban bury ವಿಭಾಗದಲ್ಲಿ ಯಾವುದೇ ರೀತಿಯ ಅನುಭವ ಇಲ್ಲದೇ ಇದ್ದರೂ ಕೂಡ ನಾವು ಸದರಿ ವಿಭಾಗದಲ್ಲಿ  ಕೆಲಸ ಮಾಡಲು ಅವರನ್ನು ನಿಯೋಜನೆ ಮಾಡಿದ್ದೇವು ಎಂದರೆ ಸರಿಯಲ್ಲ.

ದಿನಾಂಕಃ12.06.2025 ರಂದು  1 ನೇ ಪಕ್ಷಗಾರರ ಪಂಚ್ ಕಾರ್ಡ್ ಅನ್ನು ನಾವು ಲಾಕ್ ಮಾಡಿದ್ದೇವು ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ಭದ್ರತಾ ಸಿಬ್ಬಂದಿಯವರು ಸದರಿ ವಿಚಾರವನ್ನು 1 ನೇ ಪಕ್ಷಗಾರರಿಗೆ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂಬಂಧ 1 ನೇ ಪಕ್ಷಗಾರರು ವಿಡಿಯೋ ಹಾಜರು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ದಿನಾಂಕಃ 01.07.2025 ರಂದು  1 ನೇ ಪಕ್ಷಗಾರರು ಕೆಲಸಕ್ಕೆ ಪುನರ್ ನೇಮಕ ಮಾಡಿಕೊಳ್ಳಬೇಕು ಹಾಗೂ ಹಿಂಬಾಕಿ ವೇತನವನ್ನು ನೀಡಬೇಕು ಎಂದು ನ್ಯಾಯಾಲಯದ ಮುಂದೆ ಈ ಪ್ರಕರಣವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ 1 ನೇ ಪಕ್ಷಗಾರರು ಕೆಲಸಕ್ಕೆ ಗೈರು ಹಾಜರಾಗುತ್ತಿದ್ದರು ಹಾಗೂ ಇತರೆ ದುರ್ವತನೆಗಳನ್ನು ಸಹಾ ಮಾಡಿದ್ದರು,

ನಾವು ಅವರಿಗೆ ಕಾರಣ ಕೇಳಿ ನೋಟೀಸ್ ನೀಡಿದ್ದೇವು ಆದ ಕಾರಣ ಈ ವಿವಾದವನ್ನು ಮಾಡಿರುತ್ತಾರೆ ಎನ್ನುತ್ತಾರೆ. ಈ ಕೇಸ್ ಅನ್ನು ದಾಖಲು ಮಾಡಿದ ನಂತರ 2 ನೇ ಪಕ್ಷಗಾರರಿಗೆ ನೋಟೀಸ್ ಹೋದ ನಂತರ bio-metric ಅನ್ನು enable ಮಾಡಿದ ನಂತರ ಪಂಚ್ ಲಾಕ್ ತೆಗೆದುಕೊಂಡಿದ್ದ ನಂತರ ದಿನಾಂಕಃ 02.08.2025 ರಂದು ಕೆಲಸಕ್ಕೆ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪಕ್ಷಗಾರರು ಈಗ ನಮ್ಮಲ್ಲಿ ಕೆಲಸ ಮಾಡುತ್ತಿರುತ್ತಾರೆ ಎನ್ನುತ್ತಾರೆ. ದಿನಾಂಕಃ 02.08.2025 ರಂದು 1 ನೇ ಪಕ್ಷಗಾರರ bio-metric ಅನ್ನು enable ಮಾಡಿದ್ದೇವು ಎಂದರೆ ಸಾಕ್ಷಿ ಆ ಪ್ರಶ್ನೆ ಬರುವುದಿಲ್ಲ ಎನ್ನುತ್ತಾರೆ. 1 ನೇ ಪಕ್ಷಗಾರರು ಕೆಲಸಕ್ಕೆ ಯಾವ ದಿನಾಂಕದಿಂದ ಸೇರಿಕೊಂಡಿರುತ್ತಾರೆ ಎಂದರೆ ಹಾಜರಾತಿ ಪುಸ್ತಕವನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ.

ಪಂಚ್ ಲಾಕ್ ಅನ್ನು ಅನ್‌ಲಾಕ್ ಮಾಡಿ ಎಂದು ಹೇಳಿಕೊಂಡು 1 ನೇ ಪಕ್ಷಗಾರರು ಪತ್ರ ಕೊಟ್ಟಿದ್ದರ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿಯೊಬ್ಬ ಕಾರ್ಮಿಕರಿಗೆ bio-metric ಇರುತ್ತದೆ ಹಾಗೂ ಹಾಜರಾತಿ ಕಾರ್ಡ್ ಅನ್ನು ಕೊಟ್ಟಿರುತ್ತೇವೆ. ಈ ವರ್ಷದ ಆಗಸ್ಟ್ ತಿಂಗಳಿನಲ್ಲಿ 1 ನೇ ಪಕ್ಷಗಾರರಿಗೆ ಎಷ್ಟು ಹಾಜರಾತಿ ಕೊಟ್ಟಿರುತ್ತೀರ ಎಂದರೆ ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ. ಹಾಜರಾತಿ ಪುಸ್ತಕವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೇವೆ ಎನ್ನುತ್ತಾರೆ.

ನಮ್ಮಲ್ಲಿ ಬದಲಿ ಕಾರ್ಮಿಕರ ಹಾಜರಾತಿ ದಾಖಲೆಯನ್ನು ಮೇಲ್ ವಿಚಾರಕರು ಸಹಿ ಮಾಡುವ ಪದ್ಧತಿ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯ ಆಧಾರದ ಮೇಲೆ ನಾವು computerized ಹಾಜರಾತಿ ದಾಖಲೆಯನ್ನು ತಯಾರು ಮಾಡುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಎಷ್ಟು ಕಾಲ ಸಂಸ್ಥೆಯಲ್ಲಿ ಉಳಿಸಿಕೊಳ್ಳುತ್ತೀರ ಎಂದರೆ ಸಾಕ್ಷಿ ಅದನ್ನು record room ಗೆ ಕಳುಹಿಸುತ್ತೇವೆ ನಂತರ ಅದು ಯಾವಾಗ ವಿಲೆಯಾಗುತ್ತದೆ ಎಂಬುದು

ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯ ಮುಂದೆ ಹಾಜರು ಪಡಿಸಲು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿ ಅದನ್ನು ನೋಡಬೇಕು ಎನ್ನುತ್ತಾರೆ. 1 ನೇ ಪಕ್ಷಗಾರರಿಗೆ ಅಕ್ಟೋಬರ್ ತಿಂಗಳಿನಲ್ಲಿ 20 ದಿನ ಹಾಗೂ ನವೆಂಬರ್ ತಿಂಗಳಿನಲ್ಲಿ 18 ದಿನ ಕೆಲಸ ನೀಡಿರುತ್ತೇವೆ ಎಂದರೆ ಲಭ್ಯತೆ ಆಧಾರದ ಮೇಲೆ ಕೆಲಸ ನೀಡಿರುತ್ತೇವೆ ಎನ್ನುತ್ತಾರೆ. ನ್ಯಾಯಾಲಯದಲ್ಲಿ ಈ ಪ್ರಕರಣ ದಾಖಲಾದ ನಂತರ 1 ನೇ ಪಕ್ಷಗಾರರ ವಿರುದ್ದ. ಆಂತರಿಕ ವಿಚಾರಣೆ ನಡೆಸಿದ್ದೇವು ಎಂದರೆ ಸರಿಯಲ್ಲ.

ಈಗ 1 ನೇ ಪಕ್ಷಗಾರರ ವಿರುದ್ಧ ಆಂತರಿಕ ವಿಚಾರಣೆ ನಡೆಯುತ್ತಿರುತ್ತದೆ. 1 ನೇ ಪಕ್ಷಗಾರರ ವಿರುದ್ಧ 3-4 ಪ್ರಕರಣಗಳು ಇದ್ದು ಆಂತರಿಕ ವಿಚಾರಣೆ ನಡೆಯುತ್ತಿರುತ್ತದೆ. ದಿನಾಂಕಃ26.06.2025 ರಂದು 1 ನೇ ಪಕ್ಷಗಾರರಿಗೆ Family counseling ಗೆ ಸಂಬಂಧಪಟ್ಟಂತೆ ನೋಟೀಸ್ ನೀಡಿದ್ದೇವು ಎಂದರೆ ದಾಖಲೆ ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ. ದಿನಾಂಕಃ 26.06.2025 ರಂದು 1 ನೇ ಪಕ್ಷಗಾರರಿಗೆ ನಿ.ಡಬ್ಲ್ಯೂ-6 ರಂತೆ ಆ ರೀತಿ ಪತ್ರವನ್ನು ಕಳುಹಿಸಿದ್ದೇವು ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ನಿ.ಡಬ್ಲ್ಯೂ-6 ರ ದಾಖಲೆಯಲ್ಲಿ ಕುಟುಂಬ ಸದಸ್ಯರೊಂದಿಗೆ ಹಾಗೂ ಸಹ ಖಾಯಂ ಕಾರ್ಮಿಕ ಸಮಾಲೋಚನೆಗೆ ಹಾಜರಾಗಬೇಕು ಎನ್ನುವ ಷರತ್ತು ಕಾನೂನು ಬಾಹಿರ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಸಂಸ್ಥೆಯಲ್ಲಿ customary practice ಆಗಿರುತ್ತದೆ ಎನ್ನುತ್ತಾರೆ. ಸದರಿ ವಿಚಾರವನ್ನು ನಮ್ಮ ಸಂಸ್ಥೆಯ Standing orders ನಲ್ಲಿ ನಮೂದು ಮಾಡಿರುತದೆಯೇ ಎಂದರೆ ಅದರಲ್ಲಿ ನಮೂದು ಇಲ್ಲ ಆದರೆ ಅದು customary practice ಆಗಿರುತ್ತದೆ ಎನ್ನುತ್ತಾರೆ. ಮಾಲೀಕರು ಹಾಗೂ ಕಾರ್ಮಿಕರ ನಡುವೆ ವಿವಾದ ಉಂಟಾದಾಗ Standing orders ಪ್ರಕಾರವೇ ಪರಿಹಾರ ಕಂಡುಕೊಳ್ಳಬೇಕೇಯೇ ವಿನಹ customary practice ಪ್ರಕಾರ ಅಲ್ಲ ಎಂದರೆ ಸರಿಯಲ್ಲ.

ದಿನಾಂಕಃ 30.06.2025 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ 1 ನೇ ಪಕ್ಷಗಾರರು ನಮ್ಮ ಸಂಸ್ಥೆಗೆ ಹಾಜರಾಗಿದ್ದರೂ ಕೂಡ ಅವರನ್ನು ಭದ್ರತಾ ಸಿಬ್ಬಂದಿ ರವರು ಒಳಗೆ ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 09.10.2024 ರ ನ್ಯಾಯಾಲಯದ ಆದೇಶವನ್ನು ನಾವು ಪಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರನ್ನು ಸಮಾಲೋಚನೆಗೆ ಒತ್ತಾಯ ಮಾಡುತ್ತಿರುವುದು ಕಾನೂನು ಬಾಹಿರ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರ ಪಂಚ್ ಕಾರ್ಡ್ ಅನ್ನು ಲಾಕ್ ಮಾಡಿ ಅವರಿಗೆ ಕೆಲಸ ನೀಡದೆ ಇದ್ದು ಅದನ್ನು ನಾವು ಗೈರು ಹಾಜರು ಎಂದು ತೋರಿಸುತ್ತೀದ್ದೇವೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರ ಪಂಚ್ ಕಾರ್ಡ್ ಅನ್ನು ಲಾಕ್ ಮಾಡಿದ ಕಾರಣ ದಿನಾಂಕಃ 12.06.2025 ರಿಂದ 01.08.2025 ರವರೆಗೆ ಅವರ ಉದ್ಯೋಗ ನಷ್ಟ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಅವಧಿಯಲ್ಲಿ ಅವರು ಗೈರು ಹಾಜರಾಗಿರುತ್ತಾರೆ ಎನ್ನುತ್ತಾರೆ. ಒಟ್ಟು 49 ದಿನಗಳ ಕಾಲ 1 ನೇ ಪಕ್ಷಗಾರರು ಉದ್ಯೋಗ ನಷ್ಟ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ಸಂಸ್ಥೆಯ ವಿರುದ್ಧ 1 ನೇ ಪಕ್ಷಗಾರರು ಔದ್ಯಮಿಕ ನ್ಯಾಯಾಲಯದಲ್ಲಿ 1 ಪ್ರಕರಣ ಹಾಗೂ ಡಿ.ಎಲ್.ಸಿ. ರವರ ಮುಂದೆ 3 ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸದರಿ ಎಲ್ಲಾ ಪ್ರಕರಣಗಳನ್ನು ದಾಖಲು ಮಾಡಿದ ಕಾರಣ 1 ನೇ ಪಕ್ಷಗಾರರ ವಿರುದ್ಧ ನಾವು ಸೇಡಿನ ಕ್ರಮ ಜರುಗಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರನ್ನು ಕೆಲಸದಿಂದ ವಜಾ ಮಾಡುವ ಸಲುವಾಗಿ ಅವರ ವಿರುದ್ಧ ಈಗ 4 ಆಂತರಿಕ ವಿಚಾರಣೆಗಳನ್ನು ಪ್ರಾರಂಭ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**